ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.**

ಕಡತ ಸಂಖ್ಯೆ:ಜಂ.ನಿ[ಆ] ಆ.ಶಾಖೆ:ಮ.ಆ.ನೊಂ:01:2016-17 ದಿನಾಂಕ:20ನೇ ಅಕ್ಟೋಬರ್ 2016

## ಸುತ್ತೋಲೆ

**ವಿಷಯ**: 2016-17ನೇ ಸಾಲಿನಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಸರ್ಕಾರಿ, ಅನುದಾನ ಹಾಗೂ ಅನುದಾನರಹಿತ ಶಾಲೆಗಳ ವಿದ್ಯಾರ್ಥಿಗಳಿಗೆ ಆಧಾರ್ ನೊಂದಣಿ ಮಾಡಿಸುವ ಬಗ್ಗೆ

**ಉಲ್ಲೇಖ**:ಈ ಕಛೇರಿಯ ಸುತ್ತೋಲೆ ಸಮ ಸಂಖ್ಯೆ ದಿನಾಂಕ:03.08.2016.

*****

ಉಲ್ಲೇಖಿತ ಈ ಕಛೇರಿ ಸುತ್ತೋಲೆಯಲ್ಲಿ 2016-17ನೇ ಸಾಲಿನಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಸರ್ಕಾರಿ, ಅನುದಾನ ಹಾಗೂ ಅನುದಾನರಹಿತ ಶಾಲೆಗಳ ವಿದ್ಯಾರ್ಥಿಗಳಿಗೆ ಆಧಾರ್ ನೊಂದಣಿ ಮಾಡಿಸುವ ಬಗ್ಗೆ ಸುದೀರ್ಘವಾಗಿ ಮಾರ್ಗದರ್ಶನ ನೀಡಲಾಗಿದೆ.

ಮಕ್ಕಳಿಗೆ ಆಧಾರ್ ನೊಂದಣಿ ಕಾಯ್ದೆಯಲ್ಲಿ ತಿಳಿಸಿರುವ ಗುರುತಿನ ಚೀಟಿ ಇರುವುದಿಲ್ಲ. ಆದರೆ, ಮಕ್ಕಳನ್ನು ಗುರುತಿಸಿ ಮತ್ತು ನೊಂದಣಿ ಪ್ರಕ್ರಿಯೆಯಲ್ಲಿ ಪರಿಚಯಿಸಲು ಆಧಾರ್ ನೊಂದಣಿ ಕಾಯ್ದೆಯನ್ವಯ ಆಧಾರ್ ಕಾರ್ಡ್ ಹೊಂದಿರುವ ವ್ಯಕ್ತಿಯ ಅವಶ್ಯಕತೆ ಇರುತ್ತದೆ. ಆದುದರಿಂದ ಶಾಲೆಯಲ್ಲಿ ಆಧಾರ್ ಕಾರ್ಡ್ ಹೊಂದಿರುವ ಒಬ್ಬ ಶಿಕ್ಷಕರನ್ನು ಆಧಾರ್ ನೊಂದಣಿ ಕಾರ್ಯದಲ್ಲಿ ಮಕ್ಕಳನ್ನು ಗುರುತಿಸಿ / ಪರಿಚಯಿಸುವ ***INTRODUCER*** ಎಂದು ನೇಮಕಾತಿಗೊಳಿಸಿ, ಅನುಬಂಧ-1ರಲ್ಲಿ ತಿಳಿಸಿರುವ ಮಾಹಿತಿಯನ್ನು ಪಡೆದು ಕಳುಹಿಸಲು ತಿಳಿಸಿದೆ.

ಈ ರೀತಿ ನೇಮಕಗೊಳಿಸಿದ ಶಿಕ್ಷಕರನ್ನು ಕೆ.ಆರ್.ಡಿ.ಹೆಚ್ ನಿಂದ ಆಯಾ ಶಾಲೆಯ ಆಧಾರ್ ನೊಂದಣಿ ಅಧಿಕಾರಿಯನ್ನಾಗಿ ದೃಢೀಕರಿಸಲಾಗುವುದು. ನೊಂದಣಿ ಕಾರ್ಯದ ದಿನಾಂಕದಂದು ಆಧಾರ್ ನೊಂದಣಿ ಕಿಟ್‌ಗಳು ಆಯಾ ಶಾಲೆಗೆ ಬಂದಾಗ, ಅವರು ನೊಂದಣಿ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಮಕ್ಕಳ ಆಧಾರ್ ನೊಂದಣಿ ಕಾರ್ಯವನ್ನು ಯಶಸ್ವಿಗೊಳಿಸತಕ್ಕದ್ದು.

ಕ್ಷೇತ್ರ ಶಿಕ್ಷಣಾಧಿಕಾರಿಗಳು ಅನುಬಂಧ-1ರಲ್ಲಿ ತಿಳಿಸಿರುವ ಮಾಹಿತಿಯನ್ನು ಪಡೆದು ಆಯುಕ್ತಾಲಯಕ್ಕೆ ಅನುಬಂಧ-2ರಲ್ಲಿ ತಿಳಿಸಿರುವ ದಿನಾಂಕದಂದು ಖುದ್ದು ಹಾಜರಾಗಿ ಸಲ್ಲಿಸತಕ್ಕದ್ದು. ಕ್ಷೇತ್ರ ಶಿಕ್ಷಣಾಧಿಕಾರಿಗಳವರು ನೀಡಿದ ಮಾಹಿತಿಯನ್ನಾಧರಿಸಿ, ಸದರಿ ಶಿಕ್ಷಕರನ್ನು ನೊಂದಣಿ ಕಾರ್ಯದ ನೋಡಲ್ ಅಧಿಕಾರಿ ಮತ್ತು ***INTRODUCER*** ಆಗಿ ದೃಢೀಕರಿಸಲಾಗುವುದು ಮತ್ತು ಮಾಹಿತಿಯನ್ನು ಇ-ಮೇಲ್ ಮುಖಾಂತರ ಆಧಾರ್ ನೊಂದಣಿಗೆ ಬಾಕಿ ಇರುವ ಶಾಲೆಗಳಿಗೆ ಕಳುಹಿಸಲಾಗುವುದು. ಆದುದರಿಂದ ಇದಕ್ಕೆ ಅಗತ್ಯವಾದ ಕ್ರಿಯಾಯೋಜನೆ ಮತ್ತು ಆಧಾರ್ ಕಿಟ್‌ಗಳನ್ನು ಸಮರ್ಪಕವಾಗಿ ಬಳಸಿ, ತಾಲ್ಲೂಕಿನಲ್ಲಿರುವ ಶಾಲೆಗಳ ಎಲ್ಲಾ ಮಕ್ಕಳ ಆಧಾರ್ ನೊಂದಣಿ ಮಾಡಿಸುವುದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಅನುಬಂಧ-1ರಲ್ಲಿ ಶಾಲಾವಾರು ಮಾಹಿತಿಯನ್ನು ನಿಗಧಿಪಡಿಸಿದ ದಿನಾಂಕಗಳಂದು ಮಾಹಿತಿಯೊಂದಿಗೆ, ಸಂಬಂಧಪಟ್ಟ ಕ್ಷೇತ್ರಶಿಕ್ಷಣಾಧಿಕಾರಿಗಳು ವೈಯುಕ್ತಿಕವಾಗಿ ಹಾಜರಾಗಿ ಶ್ರೀಮತಿ ಸುಮಾದೇವಿ.ಆರ್. ಮಿರಜಕರ, ಉಪನಿರ್ದೇಶಕರು, ಅಂಕಿ ಅಂಶ ಶಾಖೆ, ಆಯುಕ್ತರ ಕಛೇರಿ, ಬೆಂಗಳೂರು, ಇವರನ್ನು ಭೇಟಿ ಮಾಡಿ ಮಾಹಿತಿಗಳನ್ನು ಸಲ್ಲಿಸಲು ಹಾಗೂ ಯಾವುದೇ ಕಾರಣಕ್ಕೂ ವಿಳಂಬಕ್ಕೆ ಅವಕಾಶ ನೀಡದಿರಲು ಈ ಮೂಲಕ ಸೂಚಿಸಿದೆ.

ಈ ಕೆಳಕಾಣಿಸಿರುವ ನೋಡಲ್ ಅಧಿಕಾರಿಗಳು ಆಯಾ ವಿಭಾಗದ ಕ್ಷೇತ್ರಶಿಕ್ಷಣಾಧಿಕಾರಿಗಳು ತಂದಿರುವ ಮಾಹಿತಿಯನ್ನು ಪರಿಶೀಲಿಸಿಕೊಂಡು, ಕ್ಷೇತ್ರಶಿಕ್ಷಣಾಧಿಕಾರಿಗಳೊಂದಿಗೆ ಆಯುಕ್ತರನ್ನು ಭೇಟಿ ಮಾಡಿ ಸಂಬಂಧಿಸಿದ ವರದಿಯನ್ನು ಖುದ್ದಾಗಿ ನೀಡುವುದು.

| ಕ್ರ. ಸಂ | ವಿಭಾಗ | ಮಾಹಿತಿಯನ್ನು ಪರಿಶೀಲಿಸಲು ನಿಯೋಜಿಸಿದ ಅಧೀಕ್ಷಕರು | ನೋಡಲ್ ಅಧಿಕಾರಿಗಳು |
|---|---|---|---|
| 1. | ಬೆಂಗಳೂರು ವಿಭಾಗ | ಶ್ರೀ ರಾಜಶೇಖರ್.ಬಿ,ಎಸ್. ಅಧೀಕ್ಷಕರು, ಆಡಿಟ್ ಶಾಖೆ, ಆಯುಕ್ತರ ಕಛೇರಿ, ಬೆಂಗಳೂರು | ಶ್ರೀಮತಿ ಸುಮಾದೇವಿ.ಆರ್. ಮಿರಜಕರ, ,ಉಪನಿರ್ದೇಶಕರು, ಅಂಕಿ ಅಂಶ ಶಾಖೆ, ಆಯುಕ್ತರ ಕಛೇರಿ, ಬೆಂಗಳೂರು |
| 2. | ಮೈಸೂರು ವಿಭಾಗ | ಶ್ರೀ ರಮೇಶ್ ಎ.ಆರ್. ಬಿಲ್ಲು ಹಾಗು ನಗದು ಅಧೀಕ್ಷಕರು, ಆಡಿಟ್ ಶಾಖೆ, ಆಯುಕ್ತರ ಕಛೇರಿ, ಬೆಂಗಳೂರು | |
| 3. | ಗುಲ್ಬರ್ಗಾ ವಿಭಾಗ | ಶ್ರೀ ಪ್ರಭಾಕರ್,ಅಧೀಕ್ಷಕರು, ಆಡಿಟ್ ಶಾಖೆ, ಆಯುಕ್ತರ ಕಛೇರಿ, ಬೆಂಗಳೂರು | |
| 4. | ಧಾರವಾಡ ವಿಭಾಗ | ಶ್ರೀ ಶಂಕರನಾರಾಯಣ ಪ್ರಸಾದ್, ಸಿಬ್ಬಂದಿ-8 ಶಾಖೆ ಆಯುಕ್ತರ ಕಛೇರಿ, ಬೆಂಗಳೂರು | |

(ಸೌಜನ್ಯ ಭಾ.ಆ.ಸೇ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಪ್ರತಿಯನ್ನು:

*01.* ಅಪರ ಆಯುಕ್ತರು, ಗುಲ್ಬರ್ಗಾ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
*02.* ಅಪರ ಆಯುಕ್ತರು, ಧಾರವಾಡ, ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
*03.* ರಾಜ್ಯದ ಎಲ್ಲಾ ಉಪನಿರ್ದೇಶಕರುಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
*04.* ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
*05.* ರಾಜ್ಯದ ಎಲ್ಲಾ ನೋಡಲ್ ಅಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ.
*06.* ಶ್ರೀಮತಿ ಸುಮಾದೇವಿ.ಆರ್.ಮಿರಜಕರ, ಉಪನಿರ್ದೇಶಕರು, ಅಂಕಿ ಅಂಶ ಶಾಖೆ, ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಬೆಂಗಳೂರು, ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
*07.* ಸಂಬಂಧಿಸಿದ ಅಧೀಕ್ಷಕರುಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
*08.* ಕಛೇರಿ ಪ್ರತಿ.

## ಅನುಬಂಧ-1

### *Districtwise / Talukwise / Schoolwise Aadhar information format*

| Sl No | District Name | Taluk Name | Name of the school | DISE Code | School e-mail ID | Head Master Information | | Teacher Information | | | |
|---|---|---|---|---|---|---|---|---|---|---|---|
| | | | | | | Name | Mobile No | Name | Mobile Number | Aadhar Number | E-mail ID If they have |
| | | | | | | | | | | | |

Signature with seal

Signature of H.M with seal

# ಅನುಬಂಧ-2

## ವಿದ್ಯಾರ್ಥಿಗಳ ಆಧಾರ್ ನೊಂದಣಿಗೆ ವೈಯಕ್ತಿಕವಾಗಿ ಹಾಜರಾಗಿ ಮಾಹಿತಿಯನ್ನು ನೀಡಬೇಕಾದ ವೇಳಾ ಪಟ್ಟಿ.

| ಕ್ರ.ಸಂ | ಜಿಲ್ಲೆಯ ಹೆಸರು | ಒಟ್ಟು ಶಾಲೆಗಳು | | | | ಖುದ್ದಾಗಿಮಾಹಿತಿ ಸಲ್ಲಿಸಬೇಕಾದ ದಿನಾಂಕ |
|---|---|---|---|---|---|---|
| | | ಕಿ.ಪ್ರಾ.ಶಾ | ಹಿ.ಪ್ರಾ.ಶಾ | ಪ್ರೌ.ಶಾ | ಒಟ್ಟು | |
| 01. | ಕೊಡಗು | 168 | 375 | 178 | 721 | 24.10.2016 |
| 02. | ಗದಗ | 270 | 593 | 297 | 1160 | |
| 03. | ಚಾಮರಾಜನಗರ | 412 | 555 | 210 | 1177 | |
| 04. | ಉಡುಪಿ | 270 | 693 | 293 | 1256 | |
| 05. | ಉತ್ತರ ಕನ್ನಡ | 499 | 574 | 192 | 1265 | |
| 06. | ಶಿರಸಿ | 645 | 570 | 175 | 1390 | |
| 07. | ಯಾದಗಿರಿ | 636 | 612 | 218 | 1466 | |
| 08. | ಬೆಂಗಳೂರು ಗ್ರಾಮಾಂತರ | 711 | 617 | 239 | 1567 | |
| 09. | ಕೊಪ್ಪಳ | 536 | 768 | 289 | 1593 | |
| 10. | ಧಾರವಾಡ | 358 | 869 | 414 | 1641 | |
| 11. | ಮಧುಗಿರಿ | 772 | 636 | 271 | 1679 | |
| 12. | ರಾಮನಗರ | 879 | 644 | 296 | 1819 | |
| 13. | ಹಾವೇರಿ | 582 | 924 | 396 | 1902 | 25.10.2016 |
| 14. | ಚಿಕ್ಕಮಗಳೂರು | 761 | 873 | 335 | 1969 | |
| 15. | ದಕ್ಷಿಣ ಕನ್ನಡ | 330 | 1445 | 547 | 2022 | |
| 16. | ಚಿಕ್ಕಬಳ್ಳಾಪುರ | 1008 | 790 | 293 | 2091 | |
| 17. | ಬಾಗಲಕೋಟೆ | 668 | 1154 | 452 | 2274 | |
| 18. | ಬೆಳಗಾವಿ | 698 | 1117 | 477 | 2292 | |
| 19. | ಚಿತ್ರದುರ್ಗ | 905 | 1088 | 429 | 2422 | |
| 20. | ರಾಯಚೂರು | 914 | 1100 | 412 | 2426 | |
| 21. | ದಾವಣಗೆರೆ | 814 | 1141 | 504 | 2459 | |
| 22. | ಕೋಲಾರ | 1261 | 926 | 350 | 2537 | 26.10.2016 |
| 23. | ಮಂಡ್ಯ | 934 | 1140 | 464 | 2538 | |
| 24. | ಬಳ್ಳಾರಿ | 758 | 1267 | 540 | 2565 | |
| 25. | ಬೀದರ್ | 866 | 1237 | 540 | 2643 | |
| 26. | ಶಿವಮೊಗ್ಗ | 1010 | 1316 | 472 | 2798 | |
| 27. | ಚಿಕ್ಕೋಡಿ | 958 | 1544 | 138 | 3040 | |
| 28. | ತುಮಕೂರು | 1395 | 1026 | 476 | 2897 | 27.10.2016 |
| 29. | ವಿಜಯಪುರ | 1291 | 1431 | 528 | 3250 | |
| 30. | ಹಾಸನ | 1431 | 1291 | 535 | 3257 | |
| 31. | ಮೈಸೂರು | 1090 | 1537 | 695 | 3322 | |
| 32. | ಕಲಬುರ್ಗಿ | 1201 | 1659 | 765 | 3625 | |
| 33. | ಬೆಂಗಳೂರು ದಕ್ಷಿಣ | 660 | 2158 | 1353 | 4171 | |
| 34. | ಬೆಂಗಳೂರು ಉತ್ತರ | 427 | 1425 | 967 | 2819 | |
| | ***ಒಟ್ಟು*** | ***26,118*** | ***34,795*** | ***15,140*** | ***76,053*** | |

(ಸೌಜನ್ಯ ಭಾ.ಆ.ಸೇ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ.